ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

O.S. ನಂಬರಃ 45/2017

ಡಿ. ಡಬ್ಲ್ಯೂಃ 4

ದಿಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಬೊಮ್ಮಯ್ಯ ನಾಯ್ಕ |
| ತಂದೆಯ ಹೆಸರುಃ | ನಾರಾಯಣ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ವ್ಯವಹಾರ |
| ವಿಳಾಸಃ | ಮಂಜಗುಣಿ, ಅಂಕೋಲಾ |

ಮುಖ್ಯ ವಿಚಾರಣೆಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ಸಾಕ್ಷಿಯು ನಿಡಿ-5 ಹಣ ಮುಟ್ಟಿದ ಬಗ್ಗೆ ಕರಾರು ಪತ್ರದ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಡಿ-5ಸಿ ಎಂದು ಗುರುತಿಸಲಾಯಿತು. ನಾನು ವಕೀಲರಾದ ಎಸ್ ಹೆಚ್ ನಾಯಕ ಇವರ ಕಚೇರಿಯಲ್ಲಿ ಸದರಿ ಸಹಿಯನ್ನು ಮಾಡಿರುತ್ತೇನೆ. ಜಾಗದ ವ್ಯವಹಾರದ ಸಂಬಂಧವಾಗಿ ಸಹಿಯನ್ನು ಹಾಕಿರುತ್ತೇನೆ. ನಿಡಿ-1 ರ ಮೇಲಿರುವ ಪೊಟೋದಲ್ಲಿರುವ ವ್ಯಕ್ತಿಗಳು ಆ ಸಮಯದಲ್ಲಿ ಇದ್ದರು. ನಿಡಿ-5 ನ್ನು ವಕೀಲರು ತಮ್ಮ ಕಚೇರಿಯಲ್ಲಿ ಬರೆದಿರುತ್ತಾರೆ. ಪ್ರತಿವಾದಿಯರು 3ನೇ ವಾದಿಗೆ ಹಣವನ್ನು ಕೊಟ್ಟಿರುತ್ತಾರೆ. ನಿಡಿ-5 ನ್ನು ಸುಮಾರು ಸಂಜೆ 4.30 ಗಂಟೆಗೆ ಬರೆದಿರುತ್ತಾರೆ. ನಿಡಿ-5ನ್ನು ಬರೆಯಲು 3ನೇ ವಾದಿಯು ಮಾಹಿತಿಯನ್ನು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ರಾಘವೇಂದ್ರ ರೇವಣಕರ, ಗಣಪತಿ ಜೋಷಿ, ನಾರಾಯಣ ಹರಿಕಂತ್ರ ಇವರು ಇದ್ದರು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ನಿಮ್ಮ ಊರು ಯಾವುದು ಎಂದರೆ ಮಂಜಗುಣಿ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿಯು ಊರಿನವರು ಎಂದು ನುಡಿಯುತ್ತಾರೆ. ಹಾಗೂ ಅವರು ನಮ್ಮ ಸಮಾಜದವರು ಆಗಿರುತ್ತಾರೆ. ನೀವು ನಿಡಿ-5 ರ ಮೇಲೆ ಅಂಕೋಲಾದಲ್ಲಿ ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಬೋಳೇ ಗ್ರಾಮದಲ್ಲಿ ವಕೀಲರ ಮನೆಯಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಂಕೋಲಾ ನಗರಕ್ಕೆ ಅಂಕೋಲಾ ಎಂದು ಹಾಗೂ ಬೋಳೆ ಗ್ರಾಮ ಶಡಗೇರಿ ಪಂಚಾಯತಿಗೆ ಬರುತ್ತದೆ ಎಂದರೆ ಸರಿ. ಎಸ್ ಹೆಚ್ ನಾಯಕ ಇವರ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಶೆಡಗೇರಿಯ ಬೋಳೇ ಗ್ರಾಮದಲ್ಲಿದೆ ಎಂದು ನುಡಿಯುತ್ತಾರೆ. ನೀವು ಈಗ ಇರುವ ನ್ಯಾಯಾಲಯ ಹಾಗೂ ಎಸ್ ಬಿ ಐ ಎಲ್ಲಿ ಬರುತ್ತವೆ ಎಂದರೆ ಸಾಕ್ಷಿಯು ಅಂಕೋಲಾದಲ್ಲಿ ಬರುತ್ತವೆ ಎಂದು ನುಡಿಯುತ್ತಾರೆ. ನೀವು ಏನಾದರೂ ಅಂಕೋಲಾದಲ್ಲಿ ಸಹಿಯನ್ನು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿಯರ ಮಾತನ್ನು ಕೇಳಿಕೊಂಡು ನಾನೂ ಸಹ ಸಹಿ ಮಾಡಿರುತ್ತೇನೆ ಎಂದು ಬರೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಡಿ-5 ನ್ನು ಟೈಪ್ ಮಾಡಲಾಗಿದೆಯಾ ಅಥವಾ ಗಣಕೀಕೃತ ಮಾಡಿದ್ದಾ ಎಂದರೆ ಸಾಕ್ಷಿಯು ಟೈಪ್ ಮಾಡಿದ್ದು ಎಂದು ನುಡಿಯುತ್ತಾರೆ. ಅದರ ಮೇಲೆ ಇಂತವರು ಟೈಪ್ ಮಾಡಿರುತ್ತಾರೆ ಎಂದು ನಮೂದು ಮಾಡಿರುತ್ತಾರಾ ಎಂದರೆ ಗೊತ್ತಿರುವುದಿಲ್ಲ. ವಾದಿಯರ ಅನಕ್ಷರಸ್ಥರ ದುಷ್ಪಾಯಿದೆಯನ್ನು ಪಡೆದುಕೊಂಡು ನೀವು ಹಾಗೂ ಪ್ರತಿವಾದಿಯರು ಸೇರಿಕೊಂಡು ಮೋಸ ಮಾಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿ

ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರಿಗೆ ಅವರ ತಂದೆ ತೀರಿಕೊಂಡ ನಂತರ ವಾರಸಾ ಮಾಡಿಕೊಡುತ್ತೇವೆ ಎಂದು ಸುಳ್ಳು ಹೇಳಿ ಪ್ರತಿವಾದಿಯರು ವಾದಿಯರ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನೀವು ಪ್ರತಿವಾದಿಯರು ನಿಮ್ಮ ಸಮಾಜದವರು ಎನ್ನುವ ಕಾರಣದಿಂದ ಅವರಿಗೆ ಸಹಾಯ ಮಾಡಲು ಸಹಿ ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.